
# ಆಹಾ ನಯಾಗರ!



ಪ್ರವಾಸ ಹೋದಾಗ ಆಗುವ ಅನುಭವ ರೋಚಕ. ಪ್ರವಾಸಿ ತಾಣ ನೋಡಿದಾಗ ಆಗುವುದು ಅಗಾಧ ಪುಳಕ. ಇವೆಲ್ಲವೂ ಸವಿನೆನಪುಗಳ ಸಾಲಿನಲ್ಲಿ ನಿಂತು ಬದುಕಿನುದ್ದಕ್ಕೂ ಪುಳಕ ತರುವುದು ಮನಸ್ಸಿಗೆ ಇನ್ನೂ ಪರಮಾನಂದ!

■ **ಗೀತಾ ನೆಲ್ಲೀಕಾಯಿ**

ಕೆಲವೊಮ್ಮೆ ಪ್ರವಾಸಿ ಸ್ಥಳಗಳ ಭೇಟಿ ತಂದ ಪುಳಕ ಜೀವಮಾನದುದ್ದಕ್ಕೂ ನೆನಪಿನಂಗಳದಲ್ಲಿ ಹಾಗೇ ಉಳಿಯುತ್ತದೆ. ನೆನೆದಾಗ ಮತ್ತಷ್ಟು ಖುಷಿ ಕೊಡುವ ಇಂಥ ನೆನಪುಗಳು ದಾಖಲಾದಾಗ ಸಿಗುವ ಆನಂದವೇ ಅಪರಿಮಿತ. ನ್ಯೂಜರ್ಸಿಯಲ್ಲಿರುವ ನನ್ನ ಮಗಳ ಮನೆಗೆ 1999ರಲ್ಲಿ ಹೋಗಿದ್ದೆ. ಅಲ್ಲಿಂದ ಮೊದಲ ಬಾರಿಗೆ ವಿಶ್ವಪ್ರಸಿದ್ಧ ನಯಾಗರ ಫಾಲ್ಸ್ ನೋಡುವ ಸೌಭಾಗ್ಯ ನನ್ನದಾಗಿತ್ತು. ಮಗಳ ಮನೆಯಿಂದ ಏಳು ಗಂಟೆಗಳ ಪ್ರಯಾಣ. ದಾರಿಯಲ್ಲಿ ಫಿಂಗರ್ ಲೇಕ್ ಕಾರ್ನಿಂಗ್ ಗ್ಲಾಸ್ ಕಾರ್ಖಾನೆ ಎಲ್ಲಾ ನೋಡಿ ಬಫೆಲೋ ತಲುಪಿದಾಗ ಉಂಟಾದ ಆಯಾಸವೆಲ್ಲಾ ಜಲಪಾತದ ಮೊದಲ ನೋಟದಲ್ಲೇ ಮಾಯವಾಗಿತ್ತು.

ಸಂಜೆಯಾಗುತ್ತಿದ್ದರಿಂದ ಸ್ವಲ್ಪ ವಿಶ್ರಮಿಸಿ ಕತ್ತಲಾದಂತೆ ಜಲಪಾತದ ಬಳಿ ಬಂದಾಗ ಮತ್ತೊಂದು ಅಚ್ಚರಿ ಕಾದಿತ್ತು. ಬಣ್ಣ ಬಣ್ಣದ ಬೆಳಕಿನಲ್ಲಿ ಭೋರ್ಗರೆಯುವ ಜಲಪಾತದ ಭೀಷ್ಮ ಸುಂದರ ನೋಟ ವರ್ಣಿಸಲಸದಳ. ಎಷ್ಟು ನೋಡಿದರೂ ತೃಪ್ತಯಾಗದೆ ಮನಸ್ಸಿಲ್ಲದ ಮನಸಿನಲ್ಲಿ ಹೋಟೆಲ್‌ಗೆ ಹಿಂದಿರುಗಿದೆವು. ಮರುದಿನದ ಅನುಭವ ಇನ್ನೂ ರೋಚಕವಾಗಿತ್ತು. ನಾವೆಯಲ್ಲಿ ಕುಳಿತು ಜಲಪಾತದ ಬಳಿ ಹೋಗುವ 'ಮೇಡ್ ಅಪ್ ದ ಮಿಸ್ಟ್' ಪ್ರಯಾಣ ಎಲ್ಲರೂ ರೇನ್ ಕೋಟ್ ಧರಿಸಿದ್ದರೂ ಜಲಪಾತದ ಹತ್ತಿರ ಹೋದಾಗ ಆದ ನೀರಿನ ಸಿಂಚನ, ಜಲಪಾತದ ಭೋರ್ಗರೆತದ ಅನುಭವ ವರ್ಣನಾತೀತ. ಅಂದು ನಯಾಗರದ ಅದ್ಭುತ ನೋಟಕ್ಕೆ ನಾನು ಮನಸೋತೆ. ನಯಾಗರ ಉಗಮ ನದಿ ಹರಿವ ದಾರಿ, ಅದರ ಬಗ್ಗೆ ಇರುವ ದಂತಕಥೆಗಳು ವಿವಿಧ ದೇಶದವರು ನಯಾಗರವನ್ನು ದಾಟಲು ಮಾಡಿದ ಸಾಹಸಗಳು ಎಲ್ಲವನ್ನೂ ಬಿಂಬಿಸುವ ಐಮಾಕ್ಸ ಚಿತ್ತವೀಕ್ಷಣೆಯಂತೂ ಮರೆಯಲಾಗದ ಅನುಭವ. ಹೀಗೆ ಪ್ರಾರಂಭವಾದ ನನ್ನ

ನಯಾಗರದ ಒಡನಾಟ ನನ್ನ ಮಗ ಕೆನಡಾಗೆ ಹೋದ ನಂತರ ಮುಂದುವರೆಯಿತು. ಟೊರೆಂಟೋದಲ್ಲಿರುವ ಮಗನ ಮನೆಗೆ ಜಲಪಾತವಿರುವ ನಯಾಗರಾ 'ಆನ್ ದ ಲೇಕ್' ಎಂಬ ಊರು ಹತ್ತಿರವಿರುವುದರಿಂದ ಅಲ್ಲಿ ಹೋದಾಗಲ್ಲೆಲ್ಲಾ ನಯಾಗರ ವೀಕ್ಷಣೆ ತಪ್ಪಿಸುವುದಿಲ್ಲ. ಕೆನಡಾದಿಂದ ಕಾಣುವ ನಯಾಗರದ ನೋಟ ಇನ್ನೂ ಸೊಗಸು.

ಲಾಳದಾಕಾರದ ಜಲಪಾತದ ಪೂರ್ಣ ಚೆಲವು ಇಲ್ಲಿ ಲಭ್ಯ. ಜಲಪಾತದ ಹಿಂಬದಿ ಗುಹೆಯೊಳಗೆ ಹೋಗಿ ನೋಡುವ 'ಜರ್ನಿ ಬಿಹೈಂಡ್ ದ ಫಾಲ್ಸ್' ಒಂದು ಅದ್ಭುತ ಅನುಭವ. ಶುಕ್ರವಾರಗಳಂದು ನಡೆಯುವ 'ಫೈರ್ ವರ್ಕ್ಸ್' ಕ್ರಿಸ್ಮಸ್ ತಿಂಗಳಿನ ದೀಪೋತ್ಸವ ಎದುರಿರುವ ಸ್ಕೈಲಾನ್ ಟವರಿನಿಂದ ಕಾಣುವ ಜಲಪಾತದ ವಿಹಂಗಮ ನೋಟ ಒಂದೇ ಎರಡೇ!

ಒಟ್ಟಿನಲ್ಲಿ ನಯಾಗರ ನನ್ನ ಮನಸೆಳೆದಿದೆ. 5–6 ಬಾರಿ ನೋಡಿದ್ದರೂ ಮತ್ತೆ ನೋಡ ಬೇಕೆನಿಸುತ್ತದೆ. ಈ ಬಾರಿಯ ಜುಲೈನಲ್ಲಿ ನನ್ನ ಮಗ, ಮೊಮ್ಮಗನೊಂದಿಗೆ ಮತ್ತೆ ನೋಡಿದ್ದು ಕಣ್ಣಿಗೆ ಕಟ್ಟಿದಂತಿದೆ. ಹ್ಯಾಟ್ಸ್ ಅಫ್ ಟು ನಯಾಗರ! ■